ತಮಿಳುನಾಡಿನವರಿಗೆ ಅವಕಾಶವನ್ನು ಕೊಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ಕೆಆರ್‌ಐಡಿಎಲ್‌ನಲ್ಲಿ ಒಳ್ಳೆಯ ಅಂಕಗಳನ್ನು ಪಡೆದು ಪಾಸಾದರೂ ಅವಕಾಶ ಕೊಡುತ್ತಿಲ್ಲ. ತಾವು ದಯವಿಟ್ಟು ಮಧ್ಯೆ ಪ್ರವೇಶಿಸಿ ಕರ್ನಾಟಕದ ಎಂಜಿನಿಯರಿಂಗ್‌ಗಳಿಗೂ ಕೂಡ ಇಂಥ ಬೃಹತ್ ಉದ್ದಿಮೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅವಕಾಶ ಕೊಡುವ ರೀತಿಯಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಬೇಕು ಎಂದು ಹೇಳಿ ಈ ಎರಡು ಪ್ರಶ್ನೆಗಳನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛಿಸುತ್ತಿದ್ದೇನೆ.

ಶ್ರೀ ಬಿ.ಎಲ್. ಶಂಕರ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಎಂಆರ್‌ಪಿಎಲ್ ಸಂಸ್ಥೆ, ಹೆಚ್.ಪಿ.ಸಿ.ಎಲ್. ಸಂಸ್ಥೆ ಮತ್ತು ಬಿ.ಹೆಚ್.ಇ.ಎಲ್. ಸಂಸ್ಥೆಗಳಿಂದ ನಗರಾಭಿವೃದ್ಧಿ, ಪ್ರಾಧಿಕಾರಕ್ಕೆ ಬರಬೇಕಾಗಿರುವ ಅಭಿವೃದ್ಧಿ ಚಾರ್ಜಿನ ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅದು ನಿಜ ಇದೆ. ಇಷ್ಟೊಂದು ಪ್ರಮಾಣದ ಡೆವಲಪ್‌ಮೆಂಟ್ ಚಾರ್ಜಸ್‌ನ್ನು ಈ ಕಂಪನಿಗಳ ಮೇಲೆ ಹಾಕಿರುವ ಕಾರಣದಿಂದಲೆ ಅವರು ಜಾಸ್ತಿಯಾಗಿದೆ ಎಂದು ಕೆಲವರು ಇದರ ಬಗ್ಗೆ ಕೋರ್ಟಿಗೆ ಹೋಗಿದ್ದಾರೆ ಎನ್ನುವ ಮಾಹಿತಿಯನ್ನು ಕೂಡ ಅವರೇ ಕೊಟ್ಟಿದ್ದಾರೆ. ಇದರಲ್ಲಿ ಅವರೊಟ್ಟಿಗೆ ಸರ್ಕಾರ ಶಾಮೀಲಾಗಿದೆ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ನಾವು ಹಾಕಿರುವ ಡೆವಲಪ್‌ಮೆಂಟ್ ಚಾರ್ಜಿನ ತುಂಬಾ ಜಾಸ್ತಿಯಾಗಿದೆ ಎಂದು ಕಂಪನಿಯವರು ಕೋರ್ಟಿಗೆ ಹೋಗಿರುವ ಕಾರಣದಿಂದ ಇದರ ವಸೂಲಿ ವಿಳಂಬವಾಗಿದೆ. ಇದರ ಬಗ್ಗೆ ಕೋರ್ಟಿನಿಂದ ತಡೆಯಾಜ್ಞೆ ತೆಗೆದುಕೊಂಡಿದ್ದಾರೆ. ಈ ತಡೆಯಾಜ್ಞೆಯನ್ನು ತೆರವು ಮಾಡಲಿಕ್ಕೆ ಸರ್ಕಾರ ಏನೇನು ಪ್ರಯತ್ನ ಮಾಡಿದೆ ಎನ್ನುವ ಸಂಪೂರ್ಣ ಮಾಹಿತಿಯನ್ನು ಪಡೆದು ನಾನು ಸನ್ಮಾನ್ಯ ಸದಸ್ಯರಿಗೆ ಒದಗಿಸುವ ಪ್ರಯತ್ನವನ್ನು ಮಾಡುತ್ತೇನೆ. ಇನ್ನು ಎಂಆರ್‌ಪಿಎಲ್ ನಲ್ಲಿ 900 ಜನರಲ್ಲಿ 100 ಜನರು ಮಾತ್ರ ಕನ್ನಡಿಗರು ಇದ್ದಾರೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆದ್ದರಿಂದ ಅಲ್ಲಿರುವ ಟೋಟಲ್ ಎಂಪ್ಲಾಯೀಸ್ ಎಷ್ಟು ಅದರಲ್ಲಿ ಕನ್ನಡಿಗರೆಷ್ಟು? ಬೇರೆಯವರಿಗೆ ಉದ್ಯೋಗ ಸಿಗದೆ ಹೋದರೆ ಅದಕ್ಕೇನು ಕಾರಣ ಎಂದು ಇಷ್ಟು ವಿವರಗಳನ್ನು ನಾನು ಸಂಬಂಧಪಟ್ಟ ಕಂಪನಿಯವರಿಂದ ಪಡೆದು ಸನ್ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

(ii) ಕಾವೇರಿ ನದಿ ಉಕ್ಕಿ ಹರಿಯುವ ಸಂದರ್ಭದಲ್ಲಿ ಪ್ರವಾಹಕ್ಕೆ ಸಿಕ್ಕಿ ಮೃತರಾದವರ ಕುಟುಂಬಗಳಿಗೆ ಪರಿಹಾರ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್(ಸೋಮವಾರಪೇಟೆ) :— ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಕಂದಾಯ ಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಗಮನ ಸೆಳೆಯುತ್ತಿದ್ದೇನೆ. ದಿನಾಂಕ 1-7-98 ರಂದು ಕಾವೇರಿ ನದಿ ಉಕ್ಕಿ ಹರಿಯುವ ಸಂದರ್ಭದಲ್ಲಿ ಮೇದಪ್ಪ, ಬಾಬುರಾವ್ ಮತ್ತು ಬೆಳ್ಳಿಯಪ್ಪ ಎಂದು ಹೇಳಿ ಮೂರು ಜನ ಕಾರಿನಲ್ಲಿ ಹೋದವರು, ಕಾರು ಸಮೇತ ಆ ಪ್ರವಾಹದಲ್ಲಿ ಕೊಚ್ಚಿ ಹೋಗಿ ಮೂರು ಜನ

ಸತ್ತುಹೋದರು. ಆದಾದ ನಂತರ ಪರಿಹಾರಕ್ಕೆ ಪ್ರಯತ್ನಪಟ್ಟ ಸಂದರ್ಭದಲ್ಲಿ ಸರ್ಕಾರದಿಂದ ಏನು ಉತ್ತರ ಬಂದಿದೆ ಎಂದರೆ ಪೋಲೀಸ್ ಇಲಾಖೆಯ ವರದಿಯ ಪ್ರಕಾರ ಇದು ನೈಸರ್ಗಿಕ ವಿಕೋಪಕ್ಕೆ ಬರುವುದಿಲ್ಲ, ಇದರಿಂದ ಪರಿಹಾರ ಕೊಡಲು ಆರ್ಹರಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಅನಿರೀಕ್ಷಿತವಾಗಿ ಬಂದ ಪ್ರವಾಹದಲ್ಲಿ ಅವು ಕಾರು ಸಮೇತ ಕೊಚ್ಚಿ ಹೋಗಿದ್ದಾರೆ. ಅವರೇನು ಹೊಳೆಗೆ ಹೋಗಿ ಬೀಳಲಿಲ್ಲ, ರಸ್ತೆಯ ಮೇಲೆ ನೀರು ಬಂದಿದ್ದರಿಂದ ರಸ್ತೆಯ ಮೇಲೆ ಹೋಗುವ ಕಾರು ಪ್ರವಾಹಕ್ಕೆ ಸಿಕ್ಕಿ ಮೃತಪಟ್ಟಿದ್ದಾರೆ. ಅವರಿಗೆ ಪರಿಹಾರ ಕೊಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಎಫ್.ಐ.ಆರ್.ನಲ್ಲಿ ನಿಶಾ ಕುಡಿದಿದ್ದಾರೆ ಎಂದು ಹೇಳಿ ತೋರಿಸಿದ್ದಾರೆ, ಎರಡನೇ ಸಾರಿ ಈ ನಿಶಾ ಕುಡಿದಿದ್ದರಿಂದ ಸತ್ತಿದ್ದಲ್ಲ ಎಂದು ಹೇಳಿ ಕೂಡ ಅವರು ತಿಳಿಸಿದ್ದಾರೆ. ನಿಶಾ ಕುಡಿದು ಬಿದ್ದಿದ್ದರೆ ಅವರು 5 ಕಿ.ಮೀ. ದೂರದವರೆಗೂ ಹೋಗುತ್ತಿರಲಿಲ್ಲ, ಅವರು ಅಲ್ಲಿಯೇ ಬೀಳುತ್ತಿದ್ದರು. ತಾವು ದಯವಿಟ್ಟು ಅವರಿಗೆ ಪರಿಹಾರವನ್ನು ಕೊಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನಾರ್ತ್ ಕರ್ನಾಟಕದಲ್ಲಿ ತುಂಬಾ ಕಷ್ಟ ಇದೆ. ಕಾಸ್‌ವೇಸ್‌ನಲ್ಲಿ ಹೋಗುವಾಗ ಇದ್ದಕ್ಕಿದ್ದ ಹಾಗೆ ಪ್ರವಾಹ ಬಂದುಬಿಡುತ್ತದೆ. ಬಸ್ಸುಗಳು ಕೊಚ್ಚಿಹೋಗಿದ್ದಷ್ಟೂ ಕೂಡ ನಾವು ಕೇಳಿದ್ದೇವೆ. ಇದು ನಿನ್ನೆಗೆ ಒಂದು ವರ್ಷವಾಯಿತು. ಅವರು ಬರುತ್ತಿರುವಾಗ ಸ್ವಲ್ಪ ನ್ಯಾರೋ ರೋಡ್, ಒಂದು ಟರ್ನಿಂಗ್ ಅಲ್ಲಿ ಇದೆ. ಟರ್ನ್ ಥಾಟ್ ಬರುವಾಗ ಅದರೊಳಗೆ ಬರುವಾಗ ನೀರು ಬಂದು ಕೊಚ್ಚಿಹೋದರು. ಇದು ಸ್ವಾಭಾವಿಕ ಸಾವಲ್ಲ ಎನ್ನುವುದಾದರೆ ಅದರ ಒಂದು ಪಟ್ಟಿ ಬೇಕಲ್ಲಾ. ಯಾವ ಯಾವ ರೀತಿ ಸಾಯಬೇಕು ಎನ್ನುವುದಾದರೂ ಒಂದು ಪಟ್ಟಿ ಬೇಕಲ್ಲಾ. ದಾರಿಯಲ್ಲಿ ಇವರೇ ಹೋಗಿ ಅದರೊಳಗೆ ಬಿದ್ದಿದ್ದರೆ ಒಂದು ಲೆಕ್ಕ. ನಿಶಾ ತೆಗೆದುಕೊಂಡು ಹೋಗಿ ಅದರೊಳಗೆ ಬಿದ್ದರು ಎಂದರೆ ಅದು ಬೇರೆ. ಆದರೆ ದಾರಿಯಲ್ಲಿ ಕ್ರಾಸ್ ಆಗುವಾಗ ಮೇಲಿಂದ ಪ್ರವಾಹ ಬಂದು ಕೊಚ್ಚಿ ಹೋದರೆ ಅದು ನೈಸರ್ಗಿಕ ನಾವು ಅಥವಾ ಅಲ್ಲ ಎನ್ನುವುದಾದರೂ ಹೇಗೆ? ಕೊನೆಗೆ ಒಂದು ರಿಪೋರ್ಟ್ ಬಂತು, ಅವರು ನಿಶಾ ತೆಗೆದುಕೊಂಡಿದ್ದರು ಎಂದು. ಎರಡನೇ ವರದಿಯಲ್ಲಿ ಅವರು ನಿಶಾ ಸೇವನೆ ಮಾಡಿರಲಿಲ್ಲ ಎಂದು ಬಂದಿದೆ. ಏಕೆಂದರೆ ನೀರಿನಲ್ಲಿ ಬಿದ್ದು ಕಾರು ಸಮೇತ ಕೊಚ್ಚಿ ಹೋದಮೇಲೆ ಆ ಡೆಡ್ ಬಾಡಿ ಸಿಗಬೇಕಾದರೆ ಎರಡು ದಿವಸವಾಗಿರುತ್ತದೆ.

ಅಧ್ಯಕ್ಷರು :— ಪೋಸ್ಟ್ ಮಾರ್ಟಮ್ ಆಯಿತಾ?

ಶ್ರೀ ಬಿ.ಬಿ. ಶಿವಪ್ಪ :— ಆಗಿದೆ. ಪೋಸ್ಟಂ ಮಾರ್ಟಮ್ ಆದಮೇಲೆ ಎರಡನೇ ರಿಪೋರ್ಟ್‌ನಲ್ಲಿ ಅದು ಇಲ್ಲ ಎಂದು ಬಂದಿದೆ.

ಅಧ್ಯಕ್ಷರು :— ಪೋಸ್ಟ ಮಾರ್ಟಮ್ ರಿಪೋರ್ಟ್ ಏನೆಂದು ಬಂದಿದೆ?

ಶ್ರೀ ಬಿ.ಬಿ. ಶಿವಪ್ಪ :— ನಿಶಾ ತೆಗೆದುಕೊಂಡಿಲ್ಲವೆಂದು ಬಂದಿದೆ.

ಅಧ್ಯಕ್ಷರು :— ಆಲ್ಕೋಹಾಲ್ ತೆಗೆದುಕೊಂಡಿಲ್ಲ ಎಂದು ಬಂತೇ? ಆಲ್ ರೈಟ್. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಪ್ರಕೃತಿ ವಿಕೋಪ ನಿಧಿಯನ್ನು ಯಾವ ಯಾವ ರೀತಿ ಖರ್ಚು ಮಾಡಬೇಕೆಂದು ಹೇಳಿ ಕೆಲವು ಸಾರಿ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ನಾವೂ ಕೊಟ್ಟಿದ್ದೇವೆ. ಈಗ ಮೂರು ಜನರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದರೆ ಆ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಕಾಣಿಸುತ್ತದೆ. ಆದರೆ ಮತ್ತೊಂದು ಸಾರಿ ನೋಡುತ್ತೇನೆ, ಆ ವ್ಯಾಪ್ತಿಯೊಳಗಡೆ, ಮಾರ್ಗಸೂಚಿಯೊಳಗಡೆ ಬರುವುದಿದ್ದರೆ ಅವರು ಸತ್ತಿರುವುದು ನಿಜವಾಗಲೂ ಪ್ರಕೃತಿವಿಕೋಪದಿಂದಾಗಿದ್ದರೆ ಪುನರ್ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

4.10 ಪಿ.ಎಂ.

ಒ) ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್‌ಗಳ ಕುರಿತು.

ಶ್ರೀಕೆ. ಜಯರಾಮ ಶೆಟ್ಟಿ (ಉಳ್ಳಾಲ) :— ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿ ಕರ್ನಾಟಕ ಪಾಲಿಟೆಕ್ನಿಕ್ ಇದೆ. ಹಾಗೆಯೇ ಮಹಿಳೆಯರ ಒಂದು ಪಾಲಿಟೆಕ್ನಿಕ್ ಕೂಡ ಇದೆ. ರಾಜ್ಯ ಸರ್ಕಾರ ಇತ್ತೀಚೆಗೆ ಪಾಲಿಟೆಕ್ನಿಕ್‌ಗೆ ಸ್ವಾಯತ್ತತೆಯನ್ನು ಕೊಡುತ್ತೇನೆಂದು ಘೋಷಣೆ ಮಾಡಿದೆ. ಈ ಬಗ್ಗೆ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ. ತಮ್ಮ ಸ್ವಾಯತ್ತತೆ ಯಾವ ತರಹದ್ದು, ಯಾವ ರೀತಿಯಲ್ಲಿ ಕೊಡುತ್ತಿದ್ದೀರಿ ಎಂದು ತಾವು ತಿಳಿಸಿದರೆ ಒಳ್ಳೆಯದು. ಜೊತೆಗೆ ಆ ಪಾಲಿಟೆಕ್ನಿಕ್ ನಲ್ಲಿ ಕಳೆದ 25 ವರ್ಷಗಳಿಂದ ವಿದ್ಯಾರ್ಥಿಗಳು ಬಹಳಷ್ಟು ಸತ್ಯಾಗ್ರಹವನ್ನು ಮಾಡಿಕೊಂಡುಬಂದಿದ್ದಾರೆ. ಮಂಗಳೂರಿನಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಲ್ಲಿ ನಡೆದಷ್ಟು ಸತ್ಯಾಗ್ರಹಗಳು ಬೇರೆ ಯಾವ ಕಾಲೇಜುಗಳಲ್ಲೂ ನಡೆದಿಲ್ಲ. ಏಕೆಂದು ಹೇಳಿದರೆ ಸರಿಯಾದ ಸಮಯಕ್ಕೆ ಅಲ್ಲಿಗೆ ಉಪಾಧ್ಯಾಯರ ನೇಮಕಾತಿ ಆಗದಿರುವುದು. ಸಿಲಬಸ್ ಆಗದೇ ಇರುವಂತಹದು. ವಿದ್ಯಾಭ್ಯಾಸಕ್ಕೆ ಬೇಕಾದಂತಹ ಯಾವ ಪರಿಕರಗಳೂ ಕೂಡ ಅಲ್ಲಿ ಸಿಗದೇ ಇರುವಂತಹದು. ಜೊತೆಗೆ ಈಗ ಸರ್ಕಾರದ ಕಾನೂನು ಪ್ರಕಾರ ಶೇಕಡಾ 30ರಷ್ಟು ಮಹಿಳೆಯರನ್ನು ಅಲ್ಲಿ ನೇಮಕ ಮಾಡುತ್ತಿದ್ದಾರೆ. ಆದರೆ ಆ ಮಹಿಳೆಯರಿಗೆ ವಸತಿಯ ವ್ಯವಸ್ಥೆ ಇಲ್ಲ. ಹುಡುಗಿಯರ ಪಾಲಿಟೆಕ್ನಿಕ್‌ನಲ್ಲಿ ವಸತಿಯ ವ್ಯವಸ್ಥೆಯಂತೂ ಇಲ್ಲ. ಏಕೆಂದರೆ ಇಡೀ ಜಿಲ್ಲೆಯಿಂದ ಆ ಕಾಲೇಜಿಗೆ ವಿದ್ಯಾರ್ಥಿನಿಯರು ಬರುತ್ತಿದ್ದಾರೆ. ಆದ್ದರಿಂದ ಅವರು